ದಿನಾಂಕಃ **19-12-2024** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು

ಪಾಟೀ ಸವಾಲುಃ ಪ್ರತಿವಾದಿ ನಂ **1** ರಿಂದ **6, 8** ಗಳ ಪರ ವಕೀಲರಿಂದ

ನನಗೆ ಭಾಗ್ಯಮ್ಮ ಮತ್ತು ಪೂರ್ಣಿಮ ಎಂದು ಕೂಡ ಕರೆಯತ್ತಾರೆ ಎಂದರೆ ಸರಿ. ನಾನು 7 ನೇ ತರಗತಿಯವರೆಗೆ ಅಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ನಮ್ಮ ತಂದೆಯ ಹೆಸರು ಸಿದ್ದಪ್ಪ ಮತ್ತು ತಾಯಿ ತಿಮ್ಮಮ್ಮ ಎಂದರೆ ಸರಿ. ನನ್ನ ತಂದೆ-ತಾಯಿಗೆ ಒಟ್ಟು 5 ಜನ ಮಕ್ಕಳು ಇರುತ್ತೇವೆ ಅವರೆಂದರೆ ಮಂಜುನಾಥ, ಜಯ್ಯಮ್ಮ, ನಾನು, ದೇವರಾಜು ಮತ್ತು ಕೃಷ್ಣಮೂರ್ತಿ. ಜಯ್ಯಮ್ಮನಿಗೆ ಮಕ್ಕಳು ಇಲ್ಲ ಅವರು ಮರಣ ಹೊಂದಿದ್ದಾರೆ ಎಂದರ ಸರಿ. ನನ್ನ ಮದುವೆ ದಿಃ19-01-1995 ರಂದು ಆಗಿದೆ ಎಂದರೆ ಸರಿ. ನನ್ನ ಮದುವೆಯ ಕಾಲಕ್ಕೆ ನನ್ನ ತಂದೆ ಜೀವಂತ ಇರಲಿಲ್ಲ. ನನ್ನ ವಿವಾಹವನ್ನು ನನ್ನ ತಂದೆಯ ಸ್ಥಾನದಲ್ಲಿ ನಿಂತು ನನ್ನ ಸಹೋದರರೇ ಮಾಡಿದ್ದಾರೆ ಎಂದರೆ ಸರಿ. ಇಂಜಿನಿಯರ್ ಉದ್ಯೋಗ ಮಾಡುವ ವರನಿಗೆ ಕೊಟ್ಟು ನನ್ನ ಮದುವೆ ಮಾಡಿದ್ದಾರೆ ಎಂದರೆ ಸರಿ. ನಾನು ನನ್ನ ತಾಯಿ ಮತ್ತು ಸಹೋದರರು ಎಲ್ಲರೂ ಇವತ್ತಿನವರೆಗೂ ವಿಶ್ವಾಸದಿಂದಲೇ ಇದ್ದೇವೆ ಎಂದರೆ ಸರಿ. ನನ್ನ ತಾಯಿ ಮನೆಯಲ್ಲಿ ಆಗುವ ಎಲ್ಲಾ ವ್ಯವಹಾರಗಳು ನನ್ನ ಗಮನಕ್ಕೆ ಬಂದಿವೆ ಎಂದರೆ ಸರಿ.

2. ಭಾರತ್ ಟಾಕೀಸ್ ಎದುರಿಗೆ 7 ನೇ ಪ್ರತಿವಾದಿ ಒಂದು ಹಣ್ಣಿನ ಅಂಗಡಿ ಸ್ವಂತಕ್ಕೆ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ, ಒಟ್ಟು ಕುಟುಂಬದಿಂದ ಇಡಲಾಗಿತ್ತು. ನಮಗೆ ಪಿತ್ರಾರ್ಜಿತವಾಗಿ ಬಂದ 8 ಎಕರೆ 33 ಗುಂಟೆ ಜಮೀನು ಇಂದಾವರ ಗ್ರಾಮದಲ್ಲಿ ಇತ್ತು ಎಂದರೆ ಸರಿ. ಅದೇ ರೀತಿ ತರೀಕೆರೆ ಪಟ್ಟಣದಲ್ಲಿ ಪಿತ್ರಾರ್ಜಿತವಾಗಿ ಬಂದ ವಾಸದ ಮನೆ ಕೂಡ ಇದೆ ಎಂದರೆ ಸರಿ. ಈ ಎರಡೂ ಆಸ್ತಿಗಳನ್ನು ಹೊರತುಪಡಿಸಿ, ನಮ್ಮ ಮನೆತನಕ್ಕೆ ಪಿತ್ರಾರ್ಜಿತವಾಗಿ ಬಂದ ಬೇರೆ ಯಾವುದೇ ಆಸ್ತಿಗಳು ಇಲ್ಲ ಎಂದರೆ ಸರಿ. ನಮಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳನ್ನು ನನ್ನ ತಾಯಿ ಮತ್ತು ಸಹೋದರರು ದಿಃ07-02-2002 ರಂದು ನೊಂದಣಿ ವಿಭಾಗಪತ್ರದ ಮೂಲಕ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಆ ಪತ್ರದಂತೆ ನನಗೂ ಮತ್ತು 7 ನೇ ಪ್ರತಿವಾದಿಗೂ ಯಾವುದೇ ಆಸ್ತಿಗಳನ್ನು ಕೊಟ್ಟಿರಲಿಲ್ಲ ಎಂದರೆ ಸರಿ. 8 ಎಕರೆ 33 ಗುಂಟೆ ಜಮೀನಿನ ಪೈಕಿ ಮಂಜುನಾಥನಿಗೆ 4 ಎಕರೆ 16 ಗುಂಟೆ ಜಮೀನು ಬಿಡಲಾಗಿತ್ತು ಎಂದರೆ ಸರಿ. ಮನೆಯಲ್ಲಿ ಕೂಡ 21 ಇಂಟು 58 ಅಡಿ ವಿಸ್ತೀರ್ಣದ ಮನೆ ಮತ್ತು ಹಿತ್ತಲನ್ನು ಅವರ ಭಾಗಕ್ಕೆ ಕೊಡಲಾಗಿತ್ತು ಎಂದರೆ ಸರಿ. 8 ನೇ ಪ್ರತಿವಾದಿಗೆ 2 ಎಕರೆ 16 ಗುಂಟೆ ಜಮೀನು ಕೊಡಲಾಗಿತ್ತು ಎಂದರೆ ಸರಿ. ಅದೇ ರಿತೀ ವಾಸದ ಮನೆಯಲ್ಲಿ 21 ಇಂಟು 35 ವಿಸ್ತೀರ್ಣದ ಮನೆ ಕೂಡ ಕೊಡಲಾಗಿತ್ತು ಎಂದರೆ ಸರಿ. 8 ನೇ ಪ್ರತಿವಾದಿ ತನ್ನ ಪಾಲಿನ ಪೈಕಿ 2 ಎಕರೆ ಜಮೀನನ್ನು ತಾಯಿಯಾದ ತಿಮ್ಮಮ್ಮನಿಗೆ ಬರೆಸಿದ್ದರು ಎಂದರೆ ಸರಿ. 7 ನೇ ಪ್ರತಿವಾದಿಗೆ 21 ಇಂಟು 35 ವಿಸ್ತೀರ್ಣದ ಮನೆಯನ್ನು ಕೊಟ್ಟಿದ್ದರು ಎಂದರೆ ಸರಿ. ಮೇಲೆ ಹೇಳಿದಂತೆ ಆಸ್ತಿಗಳ ಹಿಸ್ಸೆ ಆಗಿ ಖಾತೆ ಮಾಡಿಕೊಂಡು ಸ್ವಾಧೀನ ಕೂಡ ಪಡೆದುಕೊಂಡಿದ್ದರು ಎಂದರೆ ಸರಿ. ಈ ಎಲ್ಲಾ ವಿಷಯಗಳು ನನಗೆ ನೊಂದಣಿ ವಿಭಾಗ ಪತ್ರ ಆದಾಗಲೇ ಮಾಹಿತಿ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಆ ಬಗ್ಗೆ ದಾಖಲೆಗಳನ್ನು

ನೋಡಿರಲಿಲ್ಲ ಇತ್ತೀಚೆಗೆ ನೋಡಿದ್ದೇನೆ ಎನ್ನುತ್ತಾರೆ. ಅವರವರ ಹಿಸ್ಸೆಯ ಜಮೀನುಗಳಲ್ಲಿ ಅವರೇ ತೋಟ ಮಾಡಿಕೊಂಡು ಬೆಳೆ ಕೂಡ ಬೆಳೆಯುತ್ತಿದ್ದರು ಎಂದರೆ ಸರಿ.

3. ದಿ:09-05-2017 ರಂದು ನನ್ನ ತಾಯಿಯ ಹಿಸ್ಸೆಗೆ ಬಿಟ್ಟಿದ್ದ 2 ಎಕರೆ 16.8 ಗುಂಟೆ ಜಮೀನಿನಲ್ಲಿ ನಾನು, 1 ನೇ ಪ್ರತಿವಾದಿ ಮತ್ತು 7 ಮತ್ತು 8 ನೇ ಪ್ರತಿವಾದಿಗಳು ನೊಂದಣಿ ವಿಭಾಗಪತ್ರದ ಮೂಲಕ ಭಾಗ ಮಾಡಿಕೊಂಡಿದ್ದೆವು ಎಂದರೆ ಸರಿ, ಸಾಕ್ಷಿಯು ಈ ಪತ್ರದ ಮೂಲಕ 7 ನೇ ಪ್ರತಿವಾದಿಗೆ ಭಾಗ ಕೊಡಬಾರದಾಗಿತ್ತು ಎಂದು ಹೇಳುತ್ತಾರೆ. ನೊಂದಣಿ ವಿಭಾಗ ಪತ್ರದಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ನಿಜವಾಗಿವೆ ಎಂದರೆ ಸರಿ. ಮೊದಲಿಗೆ ನನಗೆ ಭಾಗ ಕೊಡದೇ ಇದ್ದ ಕಾರಣ 2 ನೇ ಬಾರಿ ನನ್ನ ತಾಯಿಯ ಆಸ್ತಿಯಲ್ಲಿ ಭಾಗ ಪಡೆದುಕೊಂಡು ನೊಂದಣಿ ಪತ್ರವನ್ನು ಎಲ್ಲರೂ ಸೇರಿ ಓದಿ ಆತ್ಮ ಸಂತೋಷದಿಂದ ಸಹಿ ಮಾಡಿದ್ದೇವೆ ಎಂದರೆ ಸರಿ. ನನ್ನ ಹೆಸರಿಗೆ ಖಾತೆ ಕೂಡ ಬಂದಿದೆ ಎಂದರೆ ಸರಿ. ನನ್ನ ಹಿಸ್ಸೆಯ ಜಮೀನಿನಲ್ಲಿ ನಾನು ಅಡಿಕೆ ತೋಟವನ್ನು ಕೂಡ ಮಾಡಿದ್ದೇನೆ ಎಂದರೆ ಸರಿ. ವಿಭಾಗದಲ್ಲಿ ನನಗೆ 1 ಎಕರೆ ಜಮೀನು ಕೊಟ್ಟಿದ್ದಾರೆ ಎಂದರೆ ಸರಿ. ಈ ಪ್ರಕರಣ ಹಾಕುವ ಪೂರ್ವದಲ್ಲಿ ಮೇಲೆ ಹೇಳಿದ ವಿಭಾಗ ಪತ್ರಗಳು ಕಾನೂನುಬದ್ದವಾಗಿ ಇಲ್ಲ ಎಂದು ನಾನು ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿಲ್ಲ ಎಂದರೆ ಸರಿ.

( ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ನೀಡಲಾಯಿತು.)

<u>ಮರು ವಿಚಾರಣೆ:</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.